# ಅಕ್ಕಿ ಅಣಬೆ





ಹೆಸರೇ ಹೇಳುವಂತೆ ಒಂದು ಮೂಟೆ ಅಕ್ಕಿಯನ್ನು ಸುರಿದು ರಾಶಿ ಇಟ್ಟ ಹಾಗೆ ಕಾಣಿಸುವ ಇದು ಅಕ್ಕಿ ಅಣಬೆ. ಮಳೆಗಾಲದ ಪ್ರಾರಂಭದಲ್ಲಿ, ಮಲೆನಾಡಿನ ಕಾಡುಗಳಲ್ಲಿ ಸಿಗುವಂತಹ ಈ ಅಕ್ಕಿ ಅಣಬೆ ಗುಂಪು ಗುಂಪಾಗಿ ಬೆಳೆಯುತ್ತದೆ. ಒಂದು ಕಪ್ಪು ಚುಕ್ಕೆಯು ಇಲ್ಲದ ಶ್ವೇತ ವರ್ಣದ ಈ ಅಣಬೆಗಳು ನೋಡಲು ಎಷ್ಟು ಚೆಂದವೋ ತಿನ್ನಲು ಸಹ ಅಷ್ಟೇ ರುಚಿಕರ. ಬಹಳ ಮೃದುವಾಗಿ ಹತ್ತಿಯಂತಿರುವ ಈ ಅಣಬೆಗಳು ಒಂದು ಬುಟ್ಟಿಯಷ್ಟು ಸಿಕ್ಕರೂ ಒಲೆಯ ಮೇಲೆ ಇಟ್ಟಾಗ ಒಂದು ಹಿಡಿಯಷ್ಟು ಆಗುತ್ತದೆ. ಅಣಬೆಯ ಕೆಳಭಾಗದಲ್ಲಿ ಮಣ್ಣು, ಮರಳು, ಕಸ ಕಡ್ಡಿಗಳು ಇರುವುದರಿಂದ ಆಹಾರಕ್ಕೆ ಬಳಸುವಾಗ ನಾಲ್ಕು ಐದು ಬಾರಿ ಚೆನ್ನಾಗಿ ತೊಳೆಯುವುದು ಉತ್ತಮ. ನೈಸರ್ಗಿಕವಾಗಿ ಬೆಳೆಯುವಂತಹ, ಅಧಿಕ ಪೋಷಕಾಂಶಗಳನ್ನು ಹೊಂದಿರುವ ಈ ಅಕ್ಕಿ ಅಣಬೆಗಳ ಚಿಕ್ಕ ಚಿಕ್ಕ ಗುಂಪು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತವೆ. ಸಾಮಾನ್ಯವಾಗಿ ಮಲೆನಾಡಿಗರು ಮಳೆಗಾಲದ ಪ್ರಾರಂಭದಲ್ಲಿ ಇದರ ಖಾದ್ಯವನ್ನು ಒಂದೆರಡು ಬಾರಿಯಾದರೂ ಸವಿಯುವುದುಂಟು.

—ಜಯಂತಿ ರಾಘವೇಂದ್ರ, ಆಗುಂಬೆ

# ಕೂಲಿ ಹಣದಲ್ಲಿ ಸೈಕಲ್ ಉಡುಗೊರೆ

ರಾಯಚೂರಿನ ದೇವದುರ್ಗ ತಾಲ್ಲೂಕಿನ ಮಲ್ಲಂದಿನ್ನಿ ಗ್ರಾಮದ 24ರ ಹರೆಯದ ಯುವಕ ಆಂಜನೇಯ ತನ್ನ ಕೂಲಿ ಹಣದಿಂದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸೈಕಲ್ ಕೊಡಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ. ತಾಲ್ಲೂಕಿನ ಕೊತ್ತದೊಡ್ಡಿ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮಲ್ಲಂದಿನ್ನಿ, ಕಾಟಮಳ್ಳಿ, ಕೊರಡಾನಿ ಹಳ್ಳಿಗಳಿಗೆ ಬಸ್ ಸೌಲಭ್ಯವಿಲ್ಲ. ಹೀಗಾಗಿ, ವಿದ್ಯಾರ್ಥಿಗಳು ಐದು ಕಿ.ಮೀ. ದೂರದ ಯಮನೂರಿನಲ್ಲಿರುವ ಹೈಸ್ಕೂಲ್‌ಗೆ ನಡೆದುಕೊಂಡೇ ಹೋಗಬೇಕು. ಹಿಂದೆ ಆಟೊಗಳಲ್ಲಿ ಹೋಗುತ್ತಿದ್ದ ಮಕ್ಕಳು, ಅವುಗಳ ಸಂಚಾರ ಸ್ಥಗಿತಗೊಂಡ ಬಳಿಕ ನಡೆದುಕೊಂಡೇ ಹೋಗುತ್ತಿದ್ದರು. ಇದು ಮಕ್ಕಳಿಗೆ ದಿನನಿತ್ಯದ ಸಂಕಷ್ಟವಾಗಿತ್ತು. ಇದನ್ನೆಲ್ಲ ಗಮನಿಸಿದ ಆಂಜನೇಯ ಅವರು ತಮ್ಮೂರಿನ ಮಲ್ಲಂದಿನ್ನಿಯ ಹನ್ನೊಂದು ವಿದ್ಯಾರ್ಥಿಗಳಿಗೆ ತಮ್ಮ ಕೂಲಿ ಹಣದಿಂದಲೇ ಹನ್ನೊಂದು ಸೈಕಲ್ ಕೊಡಿಸಿದ್ದಾರೆ. ಇದಕ್ಕಾಗಿ ಐವತ್ತು ಸಾವಿರ ರೂಪಾಯಿಗಿಂತಲೂ ಹೆಚ್ಚಿನ ಹಣ ಕೊಟ್ಟು, ಮಕ್ಕಳ ಶಿಕ್ಷಣಕ್ಕೆ ನೆರವಾಗಿದ್ದಾರೆ.

—ಈರಣ್ಣ ಬೆಂಗಾಲಿ, ರಾಯಚೂರು







# ಚಳ್ಳೆಹಣ್ಣು ಉಪ್ಪಿನಕಾಯಿಯಾಗುವ ಪರಿ

ಪಶ್ಚಿಮ ಘಟ್ಟಗಳ ಕಾಡಿನಲ್ಲಿ ಕಂಡುಬರುವ ಈ ಚಳ್ಳೆಹಣ್ಣು ಅಥವಾ ಚಳ್ಳೆಕಾಯಿ, ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಮರಗಳಲ್ಲಿ ಗೊಂಚಲು ಹಿಡಿಯುತ್ತದೆ. ಹೆಚ್ಚಾಗಿ ರಾಣೇಬೆನ್ನೂರಿನಂತಹ ಉತ್ತರ ಕರ್ನಾಟಕದ ಕಡೆಗಳಲ್ಲಿ ಚಳ್ಳೆಕಾಯಿ, ಮರಗಳನ್ನು ಕಾಣಬಹುದು. ಕಾಯಿ ಬಲಿತ ಮೇಲೆ ಬೀಜ ತೆಗೆದು ತಿರುಳಿಗೆ ಉಪ್ಪಿನಕಾಯಿಗೆ ಬೇಕಾಗುವ ಸಾಮಗ್ರಿಗಳನ್ನು ಬೆರೆಸಬೇಕು. ಬಳಿಕ ಇದಕ್ಕೆ ಕಾಯಿ ಮುಳುಗುವಷ್ಟು ನೀರು ಸೇರಿಸಿ (ಇತರ ಉಪ್ಪಿನಕಾಯಿಗೆ ನೀರು ಬಳಸುವುದಿಲ್ಲ) ಇದರ ಅಂಟು ಹೋಗುವವರೆಗೂ ಬಿಸಿಲಿಗೆ ಇಡಬೇಕು. ವಾರದ ಬಳಿಕ ಉಪ್ಪಿನಕಾಯಿ ಸ್ವಾದಿಸಲು ಸಿದ್ಧ. ಬಲು ರುಚಿಕರವಿದು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ